ಸಿ. ಸಿ. ನಂ.- **1056/23**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **16-12-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ -

ಆರೋಪಿ ಈ ಹಿಂದೆ ಕಂಪ್ಯೂಟರ್ ಶಾಪ್ ಹೊಂದಿದ್ದರು, ಅವರು ಈಗ ಯಾವ ಕೆಲಸ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ. ಆರೋಪಿಯ ಪರಿಚಯ ನಿಮಗೆ ಹೇಗೆ ಇದೆ ಎಂದರೆ ಸಾಕ್ಷಿ ನಾನು ಕುರಿ ವ್ಯಾಪಾರ ಮಾಡುತ್ತೇನೆ, ನನ್ನ ಸ್ನೇಹಿತ ವಾಸು ಹುಗಾರರವರು ಆರೋಪಿಯ ಹೊಲದಲ್ಲಿ ಕುರಿ ಶೆಡ್ ಹಾಕಿಕೊಂಡಿರುತ್ತಾರೆ. ನಾನು ವಾಸು ಹುಗಾರರವರಿಂದ ಕುರಿಗಳನ್ನು ಖರೀದಿ ಮಾಡುತ್ತೇನೆ, ಹೀಗಾಗಿ ನನಗೆ ಆರೋಪಿಯ ಪರಿಚಯ ಇದೆ. ಆರೋಪಿಯ ಹೊಲದಲ್ಲಿ ನನ್ನ ಸ್ನೇಹಿತ ವಾಸು ಹುಗಾರರವರು ಶೆಡ್ ಹಾಕಿರುತ್ತಾರೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ. ನಾನು ಆರೋಪಿಗೆ ರೂ.4 ಲಕ್ಷ ಹಣ ಕೊಟ್ಟಿದ್ದೆ. ಆರೋಪಿಯ ಅಳಿಯನ ಮದುವೆ ಖರ್ಚಿಗೆಂದು ಹಾಗೂ ಆರೋಪಿ ನಡೆಸುತ್ತಿದ್ದ ಕಂಪ್ಯೂಟರ್ ಶಾಪ್ ಗೆ ಸಂಬಂಧಪಟ್ಟ ಸಾಲದ ತಿರುವಳಿಗಾಗಿ ನನ್ನಿಂದ ಆರೋಪಿ ಸಾಲ ಕೇಳಿದ್ದರು. ಅವರು 3 ತಿಂಗಳ ಒಳಗೆ ಸಾಲದ ಮರುಪಾವತಿ ಮಾಡುತ್ತೇನೆ ಎಂದು ಹೇಳಿದ್ದರು. ಆರೋಪಿಗೆ ಸಾಲ ಕೊಡುವಾಗ ಅವರಿಂದ ಯಾವುದೇ ಪತ್ರ ಬರೆಸಿಕೊಂಡಿರಲಿಲ್ಲ. ನಾನು ಆರೋಪಿಗೆ ಸಾಲ ಕೊಡುವಾಗ ನಮ್ಮ ಜೊತೆ ಬೇರೆ ಯಾರು ಇರಲಿಲ್ಲ. ಆರೋಪಿ ನನ್ನ ಮನೆಗೆ ಬಂದು ಸಾಲದ ಹಣ ಪಡೆದಿದ್ದರು. ಸಾಮಾನ್ಯವಾಗಿ ಕೈಗಡ ಸಾಲ ಕೊಡುವಾಗ ಭದ್ರತೆಗಾಗಿ ಪತ್ರವನ್ನು ಬರೆಸಿಕೊಳ್ಳಲಾಗುತ್ತದೆ ಎಂದರೆ ಸಾಕ್ಷಿ ನನಗೆ ಆರೋಪಿಯ ಮೇಲೆ ವಿಶ್ವಾಸವಿದ್ದರಿಂದ ಆ ರೀತಿ ಪತ್ರ ಬರೆಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಊರಿನಿಂದ ನಮ್ಮ ಊರು ಸುಮಾರು 150 ಕಿ.ಮೀ. ದೂರದಲ್ಲಿದೆ ಎಂದರೆ ಸಾಕ್ಷಿ ಹೌದು, ಅಂದಾಜು 120 ಕಿ.ಮೀ. ದೂರ ಇದೆ ಎಂದು ನುಡಿಯುತ್ತಾರೆ. ಆರೋಪಿಗೆ ನನ್ನಿಂದ ಸಾಲ ಪಡೆಯುವ ಅನಿವಾರ್ಯ ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿದು, ಮುಂದುವರೆದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನವೆಂಬರ್ 2022 ನೇ ಇಸವಿಯಲ್ಲಿ ಆರೋಪಿಗೆ ಸಾಲ ಕೊಟ್ಟಿರುತ್ತೇನೆ, ಆದರೆ ನಿಖರವಾದ ದಿನಾಂಕ

ನನಗೆ ನೆನಪಿಲ್ಲ. ನಾನು ನಗದು ರೂಪದಲ್ಲಿ ಆರೋಪಿಗೆ ಸಾಲ ಕೊಟ್ಟಿದ್ದೆ. ನನ್ನ ಬಳಿ ಆ ದಿನಾಂಕ ರೂ.4 ಲಕ್ಷ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಆರೋಪಿಯ ಅಳಿಯ ಮದುವೆಗೆ ಅವರು ನನ್ನನ್ನು ಆಮಂತ್ರಿಸಿರಲಿಲ್ಲ. ಆ ಮದುವೆಯ ಲಗ್ನ ಪತ್ರಿಕೆಯನ್ನು ನನಗೆ ಕೊಟ್ಟಿಲ್ಲ. ಒಂದು ವೇಳೆ ನಾನು ನಿಜವಾಗಿಯು ಆರೋಪಿಯ ಅಳಿಯ ಮದುವೆಗೆ ಸಹಾಯ ಮಾಡಿದ್ದರೆ ಅವರು ನನ್ನನ್ನು ಆ ಮದುವೆಗೆ ನನ್ನನ್ನು ಆಮಂತ್ರಿಸುತ್ತಿದ್ದರು ಎಂದರೆ ಸಾಕ್ಷಿ ಆ ಮದುವೆಗೆ ನನ್ನನ್ನು ಕರೆದಿಲ್ಲ ಎಂದು ನುಡಿಯುತ್ತಾರೆ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ರೂ.20 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ವ್ಯವಹಾರ ಮಾಡಬೇಕಾದರೆ ಖಾತೆ ಮುಖಾಂತರ ಅಥವಾ ಚೆಕ್ ಅಥವಾ ಡಿಡಿ ಮುಖಾಂತರ ಮಾಡಬೇಕು ಎಂದರೆ ಸಾಕ್ಷಿ ಇಲ್ಲ, ನಾವು ಕುರಿ ವ್ಯಾಪಾರ ಮಾಡುವುದರಿಂದ ನಗದು ರೂಪದಲ್ಲಿ ನಮಗೆ ಹಣ ಬರುತ್ತದೆ ಎಂದು ನುಡಿಯುತ್ತಾರೆ. ಕೆಲವೊಮ್ಮೆ ನನಗೆ ವಾರ್ಷಿಕವಾಗಿ ಕುರಿಗಳ ಮಾರಾಟದಿಂದ ನನಗೆ ರೂ.20 ಲಕ್ಷ ಆದಾಯ ಇರುತ್ತದೆ. ಸಾಮಾನ್ಯವಾಗಿ ಕುರಿ ವ್ಯಾಪಾರ ಮಾಡುವವರು ವಿಮೆ ಮಾಡಿಸಿರುತ್ತಾರೆ ಎಂದರೆ ಸರಿ. ನಾನು ಕುರಿಗಳಿಗೆ ವಿಮೆ ಮಾಡಿಸಿಲ್ಲ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಆರೋಪಿಗೆ ಸೇರಿದ ಇನ್ನೊಂದು ಚೆಕ್ ನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಸಂಖ್ಯೆ ಸಿಸಿ ನಂ.2465/2022 ಆಗಿದ್ದು, ಇದು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಹಾಗೂ ಜೆ ಎಂ ಎಫ್ ಸಿ ಹೊಸಪೇಟೆಯಲ್ಲಿ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಇದನ್ನು ನನ್ನ ಸ್ನೇಹಿತನಾದ ಸುಡುಗಾಡಪ್ಪ ತಂದೆ ಹನುಮಂತಪ್ಪರವರ ಮುಖಾಂತರ ಆರೋಪಿ ವಿರುದ್ಧ ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿರುವ ಚೆಕ್ ಹಾಗೂ ಈ ಪ್ರಕರಣದಲ್ಲಿರುವ ಚೆಕ್ ಒಂದಕ್ಕೊಂದು ಹೋಲಿಕೆ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಿಸಿ ನಂ.2465/2022 ಪ್ರಕರಣದಲ್ಲಿ ಆರೋಪಿಯ ಹೆಸರನ್ನು ರಾಜೂರ್ ತಂದೆ ಭರಮಪ್ಪ ಎಂದು ತೋರಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಸಿ. ಸಿ. ನಂ.- **1056/23**

ಪಿ.ಡಬ್ಲ್ಯೂ. **1**

**2.** ಆರೋಪಿ ನನ್ನಿಂದ ಯಾವುದೇ ಸಾಲ ಪಡೆಯದೇ ಇದ್ದರೂ ಸಹ ನಾನು ನನ್ನ ಸ್ನೇಹಿತನಾದ ಸುಡುಗಪ್ಪರವರ ಜೊತೆ ಸೇರಿ ಆರೋಪಿ ವಿರುದ್ದ ಈ ಮೇಲೆ ಹೇಳಿದ ಸಿಸಿ ನಂ.2465/2022 ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ/-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.